
‘ಪ್ಲೇಗ್’ ಕಾದಂಬರಿ ಹಲವಾರು ಕಾರಣಗಳಿಗಾಗಿ ಮುಖ್ಯವಾಗುವ ಒಂದು ಅಪರೂಪದ ಕೃತಿ. ಸಾಹಿತ್ಯದ ವಿದ್ಯಾರ್ಥಿಗಳಿಗೂ, ತತ್ತ್ವಶಾಸ್ತ್ರದ ಜಿಜ್ಞಾಸುಗಳಿಗೂ, ಮನಃಶಾಸ್ತ್ರದ ಅಭ್ಯಾಸಿಗಳಿಗೂ, ಕರ್ಮಸಿದ್ಧಾಂತದ ಪ್ರತಿಪಾದಕರಿಗೂ, ಸಮಾನವಾಗಿ, ಸಮೃದ್ಧವಾಗಿ ದಕ್ಕುವ ಕೃತಿ.

ಕಾರ್ಯಕಾರಣ ಸಂಬಂಧಗಳನ್ನೂ, ಅದರ ಪರಿಣಾಮವನ್ನೂ ಒಂದು ರೂಪಕದ ತರಹ ಕಟ್ಟಿಕೊಡುವ ಕೃತಿ ಇದೆಂದು ಹೇಳಲಾಗುತ್ತದೆ. ಹಾಗೆಯೇ ಇಲ್ಲಿ ಪತ್ರಕರ್ತನೊಬ್ಬನ ಸತ್ಯ ನಿಷ್ಠುರತೆಯನ್ನೂ ಕಾಣುತ್ತೇವೆ. ಕಮೂನ ಸೃಜನಶೀಲ ಒಲವಿನ ಎರಡು ಪಾತಳಿಗಳಲ್ಲಿ ಸತ್ಯಶೋಧನೆಗೆ ಇರುವಷ್ಟೇ ಮಹತ್ವ ಕಲಾತ್ಮಕ ಅಭಿವ್ಯಕ್ತಿಗೂ ಇದೆ ಎನ್ನುವುದು ಸ್ಪಷ್ಟ. ಹಲವು ನಿರೂಪಕರಿದ್ದಂತೆಯೂ ಭಾಸವಾಗುವ ಒಂದು ವಿಶಿಷ್ಟ ನಿರೂಪಣೆಯ ತಂತ್ರವೂ ಇದರಲ್ಲಿದೆ. ಈ ಕಾದಂಬರಿಯನ್ನು ನಾವು ನಿರೂಪಕ – ವೈದ್ಯರ ನಿಟ್ಟಿನಿಂದ ಕಾಣಬಹುದು, ತಾನು ಬದುಕನ್ನು ಪೂರ್ತಿಯಾಗಿಯೇ ಬಲ್ಲೆ ಎನ್ನಬಲ್ಲ ಅವನ ಗೆಳೆಯ ತಾಹೂ ನಿಟ್ಟಿನಿಂದ ನೋಡಬಹುದು, ಜೀವನವಿಡೀ ಒಂದು ವಾಕ್ಯವನ್ನು ಕಟ್ಟಲು ತೇಯುವ, ಐವತ್ತು ಪುಟಗಳ ಆತ್ಮಕತೆಯ ತುಂಬ ಅದೊಂದೇ ವಾಕ್ಯವನ್ನು ಬೇರೆ ಬೇರೆ ಬಗೆಯಲ್ಲಿ ಕಟ್ಟಿದ ಮುದುಕ–ಲೇಖಕ ಮತ್ತು ವರ್ಕಾಲಿಕ್ ಅನಿಸುವ ಗ್ರ್ಯಾಂಡ್ ನಿಟ್ಟಿನಿಂದ ನೋಡಬಹುದು, ತತ್ತ್ವಜ್ಞಾನಿಯಂತೆ ಮಾತನಾಡುವ ಗೂರಲು ಮುದುಕನ ನಿಟ್ಟಿನಿಂದ ನೋಡಬಹುದು ಅಥವಾ ಪತ್ರಕರ್ತ – ಪ್ರೇಮಿ ರೋಂಬೆಯ ನಿಟ್ಟಿನಿಂದಲೋ, ನಿಗೂಢ ಅಪರಾಧಿ ಕೊತಾ ದೃಷ್ಟಿಯಿಂದಲೋ ನೋಡಬಹುದು. ಅಂದರೆ, ಕಮೂನ ಉದ್ದೇಶ ನೀವು ಈ ಎಲ್ಲಾ ನಿಟ್ಟಿನಿಂದ




**ಪ್ಲೇಗ್ (ಕಾದಂಬರಿ)**
ಮೂಲ: ಅಲ್ಬರ್ಟ್ ಕಮೂ
ಕನ್ನಡಕ್ಕೆ:
ಎಚ್.ಎಸ್. ರಾಘವೇಂದ್ರ ರಾವ್
ಪು: 366 ಬೆ: ₹ 380
ಪ್ರ: ಚಿಂತನ ಚಿತ್ತಾರ
ನಂ. 2, ಮೂಡಾ ಕಾಂಪ್ಲೆಕ್ಸ್,
1ನೇ ಬ್ಲಾಕ್, ರಾಮಕೃಷ್ಣ ನಗರ,
ಆಂದೋಲನ ವೃತ್ತದ ಹತ್ತಿರ,
ಮೈಸೂರು – 570 022
ದೂರವಾಣಿ: 99456 68082

‘ನನ್ನ ಓದು’ ಕನ್ನಡದ ಮುಖ್ಯ ಪುಸ್ತಕಗಳನ್ನು ಪರಿಚಯಿಸುವ ಮಾಲಿಕೆ. ಪ್ರತಿ ತಿಂಗಳು ಕನ್ನಡ ಪುಸ್ತಕಗಳ ಕುರಿತ ಅವಲೋಕನವನ್ನು ಇಲ್ಲಿ ಕೊಡಲಾಗುತ್ತದೆ.